ಸಂಕೇಶ್ವರ-ಯರಗಟ್ಟಿ ರಸ್ತೆ ಸುಧಾರಣೆ

1189(1927) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ(ಸಂಕೇಶ್ವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ-ಯರಗಟ್ಟಿ ರಸ್ತೆ ಸುಧಾರಣೆಗೆ ಒದಗಿಸಿರುವ ಹಣವೆಷ್ಟು; ಇದರಲ್ಲಿ ಇಲ್ಲಿಯವರೆಗೆ ಎಷ್ಟು ಖರ್ಚು ಮಾಡಲಾಗಿದೆ?

ಆ) ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ಅಂದಾಜು ಮೊತ್ತ 97.76 ಕೋಟಿ ರೂ.ಗಳು. ಇಲ್ಲಿಯವರೆಗೆ ಯಾವುದೇ ಹಣ ಖರ್ಚಾಗಿರುವುದಿಲ್ಲ.

ಆ) ಗುತ್ತಿಗೆಯನ್ನು ದಿನಾಂಕ 21-2-2003 ರಂದು ನೀಡಲಾಗಿದ್ದು, ಕಾಮಗಾರಿಯು ಪ್ರಾರಂಭವಾದ ದಿನದಿಂದ 34 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಲ್ಯಾಂಡ್ ಬ್ಯಾಂಕಿಗೆ ಜಮೀನು

1183(1420) ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲ್ಯಾಂಡ್ ಬ್ಯಾಂಕ್‌ಗಾಗಿ ಸರ್ಕಾರಿ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಸರ್ಕಾರಿ ಆದೇಶ ಯಾವಾಗ ಹೊರಡಿಸಲಾಯಿತು?

ಆ) ಇದುವರೆಗೆ ಹಸ್ತಾಂತರಿಸಲಾದ ಭೂಮಿಯ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ಅಂಕಿ ಅಂಶ ಒದಗಿಸುವುದು)?

ಇ) ಈ ಭೂಮಿಯನ್ನು ವಾಪಸ್ಸು ಪಡೆಯಲಾಗುತ್ತಿದೆಯೇ; ಪಡೆದಿದ್ದಲ್ಲಿ, ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಈ) ಲ್ಯಾಂಡ್ ಬ್ಯಾಂಕ್ ಭೂಮಿಯನ್ನು ವಾಪಸ್ಸು ಪಡೆಯಲು ರಾಜ್ಯದಲ್ಲಿರುವ ನೋಡಲ್ ಅಧಿಕಾರಿ ಯಾರು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ: 106: ಎಲ್‌ಜಿಪಿ:88, ದಿನಾಂಕ:7-6-1993, 20-7-1994 ಮತ್ತು 27-1-1995ರಲ್ಲಿ ರಾಜ್ಯದಲ್ಲಿ ಲ್ಯಾಂಡ್ ಬ್ಯಾಂಕ್‌ಗಾಗಿ ಕೆಲವೊಂದು ಷರತ್ತುಗಳಿಗೆ ಒಳಪಡಿಸಿ ಸರ್ಕಾರಿ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಆ) 1,76,401-85 ಹೆಕ್ಟೆರ್ ಭೂಮಿ (ತಾಲ್ಲೂಕುವಾರು ವಿವರಗಳ ಪುಸ್ತಕ (1) ಮತ್ತು(2)ರಲ್ಲಿ ಇದೆ). ಈ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ.

ಇ) ಇಲ್ಲ, ಆದರೆ ಸಾರ್ವಜನಿಕ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗುತ್ತಿರುವ ಅರಣ್ಯ ಜಮೀನಿನ ಬದಲಿಗೆ ಮತ್ತು ಪರಿಹಾರ ನೆಡುತೋಪಿನ ಉದ್ದೇಶಕ್ಕಾಗಿ ಲ್ಯಾಂಡ್ ಬ್ಯಾಂಕಿನಿಂದ ಜಮೀನನ್ನು ಅರಣ್ಯ ಇಲಾಖೆಯವರು ಬಳಸಿಕೊಳ್ಳಲು ಪ್ರಸ್ತಾವನೆಗಳು ಬಂದಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

ಈ) ಈ ಮೇಲ್ಕಂಡ ಪ್ರಶ್ನೆಗೆ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.